# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ ಸಂಖ್ಯೆ (08472) 256782
ಇ-ಮೇಲ್: dcahrd1969@gmail.com

ನಿಗಮ ಕಾರ್ಯಾಲಯ, ಸ್ಟೇಷನ್ ರಸ್ತೆ
ಜೆಸ್ಕಾಂ, ಕಲಬುರಗಿ-585102.

ಸಂಖ್ಯೆ: ಜೆಸ್ಕಾಂ/ಪ್ರ.ವ್ಯ/ಉಲೆನಿ(ಮಾ.ಸಂ.ಅ)/ಐ.ಟಿ.ಸಿ./ಜಿ-11/1679/2026-27/ 10952-54 ದಿನಾಂಕ: 12 MAY 2026.

## ಪ್ರಕಟಣೆ

ರಾಷ್ಟ್ರೀಯ ಶಿಶಿಕ್ಷು (ಅಪ್ರೆಂಟಿಸ್) ತರಬೇತಿ ಯೋಜನೆಯಡಿ ಇಂಜಿನಿಯರಿಂಗ್‌ನಲ್ಲಿ ಪದವಿ ಮತ್ತು ಡಿಪ್ಲೋಮಾ ಹೊಂದಿರುವವರು ಜನೇವರಿ-2022 ರ ನಂತರ ಉತ್ತೀರ್ಣರಾದ ಅಭ್ಯರ್ಥಿಗಳು ಮಾತ್ರ ಅರ್ಹರಾಗಿರುತ್ತಾರೆ 2026-27 ಸಾಲಿನ ಶಿಶಿಕ್ಷು (ಅಪ್ರೆಂಟಿಸ್) ತರಬೇತಿಗೆ ಇಂಜಿನಿಯರಿಂಗ್ ಪದವಿ ಹಾಗೂ 3ವರ್ಷದ ಡಿಪ್ಲೋಮಾ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ಒಂದು ವರ್ಷದ ಅವಧಿಯ ತರಬೇತಿಗೆ ಗು.ವಿ.ಸ.ಕಂ.ನಿ ನಿಂದ ಅರ್ಜಿಗಳನ್ನು ಕರೆಯಲಾಗಿದೆ.

1. **ಅಭ್ಯರ್ಥಿಯ ವಿದ್ಯಾರ್ಹತೆ:**
   - ಅ. ಕರ್ನಾಟಕದ ಮಾನ್ಯತೆ ಪಡೆದ ವಿಶ್ವವಿದ್ಯಾಲಯ ಸಂಸ್ಥೆಯಿಂದ (ರಾಜ್ಯ ಸರ್ಕಾರ/ಕೇಂದ್ರ ಸರ್ಕಾರ/ಎಐಸಿಟಿಇಯುನಿಂದ ಮಾನ್ಯತೆ ಪಡೆದ ಪದವಿಯನ್ನು ಹೊಂದಿರಬೇಕು/ಪಡೆದಿರಬೇಕು.
   - ಆ. ಕರ್ನಾಟಕದ ಪಾಲಿಟೆಕ್ನಿಕ್ ಕಾಲೇಜು/ಸಂಸ್ಥೆಯಿಂದ(ರಾಜ್ಯ ಸರ್ಕಾರ/ಕೇಂದ್ರ ಸರ್ಕಾರ ಮಾನ್ಯತೆ ಪಡೆದ) 3 ವರ್ಷಗಳ ಡಿಪ್ಲೋಮಾ ಹೊಂದಿರಬೇಕು/ಪಡೆದಿರಬೇಕು.

2. **ಶಿಶಿಕ್ಷು ವೇತನ:**
   ತರಬೇತಿ ಅವಧಿಯಲ್ಲಿ ಶಿಶಿಕ್ಷುಗಳ ಮಾಸಿಕ ರೂ. 9000/- (ಇಂಜಿನಿಯರ ಪದವಿಧರರು) ಹಾಗೂ ರೂ. 8000/- (ಡಿಪ್ಲೋಮಾ ಇಂಜಿನಿಯರಿಂಗ್) ಶಿಶಿಕ್ಷು ವೇತನ ಪಡೆಯಲು ಅರ್ಹರಿರುತ್ತಾರೆ.

**ಪದವಿಧರ ಬಿ.ಇ ಇಂಜಿನಿಯರಿಂಗ್ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ರೋಷ್ಟರ್ ಆಯ್ಕೆ ಸಂಖ್ಯೆ -175**

| ಸಮತಳ ಮೀಸಲಾತಿ | ಸಾ.ಅ | ಪ.ಜಾ | ಪ.ಪಂ | ಓ.ಬಿ.ಸಿ (OBC) | | | | | ಒಟ್ಟು |
|---|---|---|---|---|---|---|---|---|---|
| | | | | ಪ್ರ.ವ-1 | ಪ್ರ.ವ.2ಎ | ಪ್ರ.ವ.2ಬಿ | ಪ್ರ.ವ.3ಎ | ಪ್ರ.ವ.3ಬಿ | |
| ಸಾಮಾನ್ಯ ಅಭ್ಯರ್ಥಿ | 52 | 20 | 08 | 05 | 17 | 05 | 05 | 06 | 118 |
| ಮಹಿಳಾ ಅಭ್ಯರ್ಥಿ | 25 | 10 | 04 | 02 | 09 | 02 | 02 | 03 | 57 |
| ಒಟ್ಟು | 77 | 30 | 12 | 07 | 26 | 07 | 07 | 09 | 175 |

**ಡಿಪ್ಲೋಮಾ ಎಲೆಕ್ಟ್ರಿಕಲ್ ರೋಷ್ಟರ್ ಆಯ್ಕೆ ಸಂಖ್ಯೆ -100**

| ಸಮತಳ ಮೀಸಲಾತಿ | ಸಾ.ಅ | ಪ.ಜಾ | ಪ.ಪಂ | ಓ.ಬಿ.ಸಿ (OBC) | | | | | ಒಟ್ಟು |
|---|---|---|---|---|---|---|---|---|---|
| | | | | ಪ್ರ.ವ-1 | ಪ್ರ.ವ.2ಎ | ಪ್ರ.ವ.2ಬಿ | ಪ್ರ.ವ.3ಎ | ಪ್ರ.ವ.3ಬಿ | |
| ಸಾಮಾನ್ಯ ಅಭ್ಯರ್ಥಿ | 29 | 11 | 05 | 03 | 10 | 03 | 03 | 03 | 67 |
| ಮಹಿಳಾ ಅಭ್ಯರ್ಥಿ | 15 | 06 | 02 | 01 | 05 | 01 | 01 | 02 | 33 |
| ಒಟ್ಟು | 44 | 17 | 07 | 04 | 15 | 04 | 04 | 05 | 100 |

3. **ಇತರೆ ಅರ್ಹತಾ ಮಾನದಂಡಗಳು:**

- ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಇಂಜಿನಿಯರಿಂಗ್ ಪದವಿಧರರು/ಡಿಪ್ಲೋಮಾದಾರರಿಗೆ ಪ್ರಥಮ ಆದ್ಯತೆ ನೀಡಲಾಗುವುದು.
- ಅಭ್ಯರ್ಥಿಗಳು ಕನ್ನಡ ಓದಲು ಮತ್ತು ಬರೆಯಲು ತಿಳಿದಿರಬೇಕು.
- ಕರ್ನಾಟಕ ರಾಜ್ಯದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.
- ಆರೋಗ್ಯವಂತ ದೃಢಕಾಯ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಅಂಗವಿಕಲರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
- ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳು ಊಟ/ವಸತಿ ಹಾಗೂ ಇತರ ವ್ಯವಸ್ಥೆಯನ್ನು ಸ್ವಂತ ಖರ್ಚಿನಲ್ಲಿ ಮಾಡಿಕೊಳ್ಳತಕ್ಕದ್ದು.
- ತರಬೇತಿಯ ಅವಧಿಯಲ್ಲಿ ತರಬೇತಿ ಸಂಸ್ಥೆಯ ನಿಯಮ/ಶಿಸ್ತು ಪಾಲಿಸತಕ್ಕದ್ದು
- ಜನೇವರಿ-2022 ನೇ ಇಸವಿಯಲ್ಲಿ ಬಿ.ಇ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಇಂಜಿನಿಯರಿಂಗ್ ಹಾಗೂ ಡಿಪ್ಲೋಮಾ ಎಲೆಕ್ಟ್ರಿಕಲ್ ಪಾಸಾಗಿರುವವರು.
- ಡಿಗ್ರಿ ಸರ್ಟಿಫಿಕೇಟ/ಪ್ರಾವಿಸನಲ್ ಡಿಗ್ರಿ ಸರ್ಟಿಫಿಕೇಟ್ (PDC)/ ಡಿಪ್ಲೋಮಾ ಸರ್ಟಿಫಿಕೇಟ್ ಹೊಂದಿರುವವರು.
- ಅಪ್ರೇಂಟಿಸ್ ಕಾಯ್ದೆ 1961ರ ಅಡಿಯಲ್ಲಿ ಈಗಾಗಲೇ ಬೇರೆ ಸಂಸ್ಥೆಯಲ್ಲಿ ಅಪ್ರೇಂಟಿಸ್ ತರಬೇತಿ ಹೊಂದಿರುವವರು ಅಥವಾ ಪ್ರಸ್ತುತ ಅಪ್ರೇಂಟಿಸ್ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳು ಒಂದು ವರ್ಷದ ಅನುಭವ ಇರುವವರು ಅರ್ಜಿ ಸಲ್ಲಿಸಲು ಅನರ್ಹರು.(ಅರ್ಜಿಯನ್ನು ಹಾಕಿದ್ದರೆ ತಿರಸ್ಕರಿಸಲಾಗುವುದು)
- ಅಪ್ರೇಂಟಿಸ್‌ಶೀಫ್ ನಿಯಮದ 5ರ ಪ್ರಕಾರ ವಯಸ್ಸಿನ ಮಿತಿ 18 ವರ್ಷಕ್ಕಿಂತ ಕಡಿಮೆ ಇರಬಾರದು.
- ಅಪ್ರೇಂಟಿಸ್ ಕಾಯ್ದೆ 1961ರ ಪ್ರಕಾರ ಅಪ್ರೇಂಟಿಸ್ ತರಬೇತಿ ಅವಧಿ ಒಂದು ವರ್ಷದ ಅವಧಿಗೆ ಇರುತ್ತದೆ.

4. **ಅರ್ಜಿ ಸಲ್ಲಿಸುವ ವಿಧಾನ:**

- ಪೂರ್ಣ ವಿವರವಿರುವ ಸ್ವಯಂ ಲಿಖಿತ ಅಥವಾ ಬೆರಳಚ್ಚು ಮಾಡಿದ ಅರ್ಜಿಗಳನ್ನು ಕೆಳಗೆ ಕಾಣಿಸಿರುವ ಅರ್ಜಿ ನಮೂನೆಯಂತೆ ಎಲ್ಲಾ ದಾಖಲೆಗಳೊಂದಿಗೆ "ಪ್ರಧಾನ ವ್ಯವಸ್ಥಾಪಕರು, (ಆ ಮತ್ತು ಮಾಸಂಅ), ನಿಗಮ ಕಛೇರಿ, ಗು.ವಿ.ಸ.ಕಂ.ನಿ, (ಜೆಸ್ಕಾಂ) ಕಲಬುರಗಿ-585102 ರವರಿಗೆ ಸಲ್ಲಿಸತಕ್ಕದ್ದು.
- ಅರ್ಜಿ ಕಳುಹಿಸುವ ಲಕೋಟೆಯ ಮೇಲೆ 2026-27ನೇ ಸಾಲಿನ ಶಿಶಿಕ್ಷು ಆಯ್ಕೆಗೆ ಪದವೀಧರರು/ಡಿಪ್ಲೋಮಾ ಎಂದು ಸ್ಪಷ್ಟವಾಗಿ ಬರೆದಿರಬೇಕು.

5. **ಅರ್ಜಿಯೊಂದಿಗೆ ಲಗತ್ತಿಸುವ ದಾಖಲೆಗಳು.**

- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಎಸ್.ಎಸ್.ಎಲ್. ಸಿ. ಅಂಕಪಟ್ಟಿ (ಝರಾಕ್ಸ್ ಪ್ರತಿ)
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಪಿ.ಯು.ಸಿ. ಅಂಕಪಟ್ಟಿ (ಝರಾಕ್ಸ್ ಪ್ರತಿ)
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಎಲ್ಲಾ ಸೇಮಿಸ್ಟರ್ ಪದವಿ ಅಂಕಪಟ್ಟಿಗಳ ಝರಾಕ್ಸ್ ಪ್ರತಿ ಲಗತ್ತಿಸಬೇಕು.
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದಎಲ್ಲಾ ಸೇಮಿಸ್ಟರ್ ಡಿಪ್ಲೋಮಾ ಅಂಕಪಟ್ಟಿ ಝರಾಕ್ಸ್‌ಪ್ರತಿ ಲಗತ್ತಿಸಬೇಕು.
- ಡಿಗ್ರಿ ಸರ್ಟಿಫಿಕೇಟ್//ಪ್ರಾವಿಸನಲ್ ಡಿಗ್ರಿ ಸರ್ಟಿಫಿಕೇಟ್(PDC)/ ಡಿಪ್ಲೋಮಾ ಸರ್ಟಿಫಿಕೇಟ್ (ಝರಾಕ್ಸ್ ಪ್ರತಿಗಳು).
- ಜಾತಿ ಪ್ರಮಾಣ ಪತ್ರ ಝರಾಕ್ಸ್ ಪ್ರತಿಯನ್ನು ಲಗತ್ತಿಸಬೇಕು.
- ಇತ್ತೀಚಿನ ದೃಢೀಕರಿಸಲ್ಪಟ್ಟ ಸರಕಾರಿ ಆಸ್ಪತ್ರೆಯ ವೈದ್ಯಕೀಯ ಯೋಗ್ಯತಾ ಪ್ರಮಾಣ ಪತ್ರದ ಝರಾಕ್ಸ್ ಪ್ರತಿಯನ್ನು ಲಗತ್ತಿಸಬೇಕು.
- ಇಬ್ಬರು ಗೆಜೆಟೆಡ್ ಅಧಿಕಾರಿಗಳಿಂದ ಇತ್ತೀಚಿನ ನಡೆತೆ ಪ್ರಮಾಣ ಪತ್ರದ ಝರಾಕ್ಸ್ ಪ್ರತಿ ಲಗತ್ತಿಸಬೇಕು.
- ಇತ್ತೀಚಿನ ಮೂರು ಭಾವಚಿತ್ರ (ಪಾಸ್ ಪೋರ್ಟ ಸೈಜಿನದು) ಇದರಲ್ಲಿ ಒಂದನ್ನು ಅರ್ಜಿಗೆ ಅಂಟಿಸುವದು.
- ಸ್ವ-ವಿಳಾಸವಿರುವ ರೂ. 25/- ಮೌಲ್ಯದ ಅಂಚೆ ಚೀಟಿಯನ್ನು ಹಚ್ಚಿದ 4X9 ಇಂಚು ಅಳತೆಯ ಒಂದು ಲಕೋಟೆ.

6. ಅಭ್ಯರ್ಥಿಗಳನ್ನು ಅರ್ಹತೆಯ ಆಧಾರದ ಮೇರೆಗೆ ಆಯ್ಕೆ ಮಾಡಲಾಗುವುದು.

7. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ.**

- ಭರ್ತಿ ಮಾಡಿದ ಅರ್ಜಿಗಳನ್ನು ಎಲ್ಲಾ ಲಗತ್ತಿನೊಡನೆ ದಿನಾಂಕ: **18.05.2026 ರಿಂದ 05.06.2026** ರವರೆಗೆ ಸಾಯಂಕಾಲ 5.00 ಗಂಟೆಯೊಳಗೆ ನೇರವಾಗಿ ಅಥವಾ ಅಂಚೆಯ ಮೂಲಕ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ) ನಿಗಮ ಕಛೇರಿ ಗು.ವಿ.ಸ.ಕಂ.ನಿ., ಸ್ಟೇಷನ್ ರೋಡ್ ಕಲಬುರಗಿ, 585102 ಇವರಿಗೆ ತಲುಪುವಂತೆ ಕಳುಹಿಸತಕ್ಕದ್ದು.

8. ಪೂರ್ಣ ವಿವರ ಮತ್ತು ದಾಖಲೆಗಳಿಲ್ಲದ ಅರ್ಜಿಯನ್ನು ತಿರಸ್ಕರಿಸಲಾಗುವುದು.
9. ಯಾವುದೇ ರೀತಿಯ ಪತ್ರ/ ದೂರವಾಣಿ ವ್ಯವಹಾರಗಳಿಗೆ ಆಸ್ಪದವಿರುವುದಿಲ್ಲ.

- ತರಬೇತಿ ಅವಧಿ ಮುಗಿದ ನಂತರ ಶಿಶಿಕ್ಷುಗಳನ್ನು ಕೂಡಲೆ ಬಿಡುಗಡೆಗೊಳಿಸಲಾಗುವುದು.ಹಾಗೂ ತರಬೇತಿ ಪೂರ್ಣಗೊಂಡ ನಂತರ ಉದ್ಯೋಗ ನೀಡಬೇಕೆಂದು ಗುವಿಸಕಂಪನಿಗೆ ಯಾವುದೇ ಭಾದ್ಯತೆ ಇರುವುದಿಲ್ಲ. ಹಾಗೂ ಉದ್ಯೋಗ ಖಾತರಿಗಾಗಿ ಹಕ್ಕೋತ್ತಾಯ ಮಾಡಲು ಬರುವುದಿಲ್ಲ.

21/5/26.

ಪ್ರಧಾನ ವ್ಯವಸ್ಥಾಪಕರು
(ಆ ಮತ್ತು ಮಾ.ಸಂ.ಅ)
ಗುವಿಸಕಂನಿ., ಕಲಬುರಗಿ.

ಪ್ರತಿಗಳು :

1. ಉಪ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕಲಬುರಗಿ ರವರಿಗೆ ಎರಡು ಕನ್ನಡ ದಿನ ಪತ್ರಿಕೆಗಳಲ್ಲಿ ಪ್ರಕಟಣೆಗಾಗಿ.
2. ಕಾರ್ಯನಿರ್ವಾಹಕ ಇಂಜಿನಿಯರ (ವಿ), ಐ.ಟಿ ಶಾಖೆ, ನಿಗಮ ಕಛೇರಿ, ಗುವಿಸಕಂನಿ, ಕಲಬುರಗಿರವರಿಗೆ ಅಂತರ ಜಾಲದಲ್ಲಿ (website) gescom.karnataka.gov.in ಪ್ರಕಟಣೆಗಾಗಿ.

# ಅರ್ಜಿ ನಮೂನೆ

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗುವಿಸಕಂನಿ., ಮಾ.ಸಂ.ಅ. ಕೇಂದ್ರ ಕಲಬುರಗಿಯಲ್ಲಿಯ ಪದವಿಧರ/ಡಿಪ್ಲೋಮಾ ಹೊಂದಿರುವ ಅಭ್ಯರ್ಥಿಗಳ ಶಿಶಿಕ್ಷು ತರಬೇತಿಗಾಗಿ ಅರ್ಜಿ2026-27

1) ಅಭ್ಯರ್ಥಿಯ ಹೆಸರು : ------------------------ ಭಾವಚಿತ್ರ

2) ತಂದೆ/ತಾಯಿ/ಪೋಷಕರ ಹೆಸರು: ------------------------

3) ಲಿಂಗ : (ಪುರುಷ/ಮಹಿಳೆ) ------------------

4) ಹುಟ್ಟಿದ ದಿನಾಂಕ : (ಎಸ್.ಎಸ್.ಎಲ್.ಸಿ. ಅಂಕಪಟ್ಟಿಯಲ್ಲಿ ಇರುವಂತೆ) -----------

5) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರೇ ಹೌದಾದರೆ ಪ್ರಮಾಣ ಪತ್ರ ಲಗತ್ತಿಸುವುದು.

6) ಇತರೇ ಹಿಂದುಳಿದ ವರ್ಗಗಳಿಗೆ (ಪ್ರವರ್ಗ-1, 2ಎ,2ಬಿ,3ಎ, 3ಬಿ, ಸಾಅ) ಪ್ರಮಾಣ ಪತ್ರ ಲಗತ್ತಿಸುವುದು

7) ಅಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆ : -----------------------------------
-----------------------------------
-----------------------------------

8) ಈ-ಮೇಲ್-ಐಡಿ : ------------------------------------------------

9) ದೃಢೀಕರಿಸಲ್ಪಟ್ಟ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಛಾಯಾಪ್ರತಿ ಲಗತ್ತಿಸುವುದು.

10) ಆಧಾರ್ ಸಂಖ್ಯೆ (ಜೆರಾಕ್ಸ ಪ್ರತಿ): ----------------------------------------

11) ದೂರವಾಣಿ ಸಂಖ್ಯೆ/ಮೋಬೈಲ್ ಸಂಖ್ಯೆ: ---------------------------

12) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನ ಪಾಸ್‌ಬುಕ್ಕ ಝರಾಕ್ಸ್ ಪ್ರತಿ.

13) ಎಸ್.ಎಸ್.ಎಲ್.ಸಿ ಶೇಖಡಾವಾರು ಗಳಿಸಿದ ಅಂಕಗಳು ----------------------ಪ್ರಮಾಣ ಪತ್ರ

14) ದ್ವಿತಿಯ ಪಿ.ಯು.ಸಿ ಶೇಖಡಾವಾರು ಗಳಿಸಿದ ಅಂಕಗಳು ----------------------ಪ್ರಮಾಣ ಪತ್ರ

15) ಇಬ್ಬರು ಗೆಜೆಟೆಡ್ ಅಧಿಕಾರಿಗಳಿಂದ ಪಡೆದ ನಡತೆ ಪ್ರಮಾಣ ಪತ್ರಗಳನ್ನು ಲಗತ್ತಿಸುವುದು.

16) ಇತ್ತೀಚಿನ ದೃಢೀಕರಿಸಲ್ಪಟ್ಟ ಜಿಲ್ಲಾ ಸರಕಾರಿ ಆಸ್ಪತ್ರೆಯ ಡಿಸ್ಟ್ರಿಕ್ಟ್ ಸರ್ಜನ್‌ರ ವೈದ್ಯಕೀಯ ಪ್ರಮಾಣ ಪತ್ರದ ಛಾಯಾಪ್ರತಿ ಲಗತ್ತಿಸುವುದು.

17) ಪದವಿಧರರ ಎಲ್ಲಾ ಸೇಮಿಸ್ಟರ್ ಅಂಕಪಟ್ಟಿಗಳು (7ನೇ ಹಾಗೂ 8ನೇ ಸೇಮಿಸ್ಟರ್ ಪದವಿಧರರು ಪರೀಕ್ಷೆಯಲ್ಲಿ ಶೇಖಡಾವಾರು ಗಳಿಸಿದ ಅಂಕಗಳು)--------------------------

18) ಪಾಸ್ ಪೋರ್ಟ ಸೈಜಿನ ಇತ್ತಿಚಿನ 2 ಭಾವ ಚಿತ್ರಗಳು.

19) ಡಿಪ್ಲೋಮಾ ಎಲ್ಲಾ ಸೇಮಿಸ್ಟರ್ ಅಂಕಪಟ್ಟಿ ಪರೀಕ್ಷೆಯಲ್ಲಿ ಒಟ್ಟು ಪಡೆದ ಅಂಕಗಳ ಶೇಖಡಾವಾರು -----------

20) ತೇರ್ಗಡೆಯಾದ ತಿಂಗಳು ಹಾಗೂ ವರ್ಷ: ------------(ಕಡ್ಡಾಯವಾಗಿ ಸಲ್ಲಿಸಬೇಕು)

21) ಸ್ವ ವಿಳಾಸ ಇರುವ 4X9 ಇಂಚು ಅಳತೆಯ 1 ಲಕೋಟೆಯನ್ನು ಅರ್ಜಿಯ ಜೊತೆಗೆ ಕಳುಹಿಸಬೇಕು.

ನಾನು ಈ ಮೂಲಕ ಘೋಷಣೆ ಮಾಡುವುದೇನೆಂದರೆ ನಾನು ನನ್ನ ಪದವಿ/ಡಿಪ್ಲೋಮಾವನ್ನು ಪೂರ್ಣಗೊಳಿಸಿರುತ್ತೇನೆ ಮತ್ತು ನಾನು ಪದವಿ/ಡಿಪ್ಲೋಮಾವನ್ನು ಪೂರ್ಣಗೊಳಿಸಿದ ದಿನಾಂಕದಿಂದ ಮೂರು ವರ್ಷದ ಅವಧಿ ಒಳಗೆ ತರಬೇತಿಗೆ ಅರ್ಜಿಯನ್ನು ಹಾಕುತ್ತಿದ್ದೇನೆ ಮತ್ತು ಈ ಮೇಲೆ ತಿಳಿಸಿರುವ ಎಲ್ಲಾ ವಿವರಗಳು ನಿಖರ ಹಾಗೂ ಸತ್ಯವೆಂದು ಪ್ರಮಾಣಿಕರಿಸುತ್ತೇನೆ. ಮತ್ತು ಮುಂದಿನ ಅವಧಿಯಲ್ಲಿ ನೀಡಿರುವ ಯಾವುದಾದರೂ ವಿವರಗಳು ತಪ್ಪೆಂದು ತಿಳಿದರೆ ನನ್ನ ತರಬೇತಿಯನ್ನು ರದ್ದು ಮಾಡಬಹುದು.

ಸ್ಥಳ : ಅರ್ಜಿದಾರರ ಸಹಿ

ದಿನಾಂಕ :